ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-1 Issue 6, May-Jun 2020, 39-42
©IIMRD, Mysuru
IIMRD JOURNALS
www.iimrd.com

# ಭಾರತದಲ್ಲಿ ವೃತ್ತಿಪರ ಸಮಾಜಕಾರ್ಯ ಶಿಕ್ಷಣದ ಬೆಳವಣಿಗೆ: ಒಂದು ಅವಲೋಕನ

ಶ್ರೀ ರಾಜೇಂದ್ರಪ್ರಸಾದ ಆಸಂಗಿ[1]

**ಪೀಠಿಕೆ**

"ಆನೋ ಭದ್ರಾಃ ಕ್ರತವೊ ಯಂತು ವಿಶ್ವತಃ" (1.89.1 ಋಗ್ವೇದ)

ಶ್ರೇಷ್ಠ ವಿಚಾರಗಳು ಎಲ್ಲಾ ದಿಕ್ಕುಗಳಿಂದಲೂ ನಮಗೆ ಬರಲಿ ಎಂಬ ಋಗ್ವೇದದ ಹೇಳಿಕೆಯಂತೆ ಸಾಕಷ್ಟು ಉದಾತ್ತ ಚಿಂತನೆಗಳನ್ನು ತನ್ನಲ್ಲಿ ಅಡಗಿಸಿಕೊಂಡಿರುವುದು ಸಮಾಜಕಾರ್ಯ. ಅಂತಹ ಒಳ್ಳೆಯ ವಿಚಾರಗಳನ್ನು ಪ್ರಾಯೋಗಿಕವಾಗಿ ಜಾರಿಗೆ ತರುವಲ್ಲಿ ಸತತವಾಗಿ ಶ್ರಮಿಸುತ್ತಿರುವ ಸಮಾಜಕಾರ್ಯದ ಕುರಿತು ಸಂಕ್ಷಿಪ್ತವಾಗಿ ಹೇಳುವುದಾಗಲಿ, ಬರೆಯುವುದಾಗಲಿ ಸುಲಭವಾದುದಲ್ಲ. ಆಡುಮುಟ್ಟದ ಸೊಪ್ಪಿಲ್ಲ ಸಮಾಜಕಾರ್ಯ ಇರಲಾರದಂತ ಕ್ಷೇತ್ರವೇ ಇಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಮೂಲತಃ ಸಮಾಜಕಾರ್ಯ ಪಾಶ್ಚಾತ್ಯ ದೇಶಗಳಲ್ಲಿ ಹುಟ್ಟಿ, ವೃತ್ತಿಯಾಗಿ ಬೆಳೆದು 20ನೇ ಶತಮಾನದ ಪೂರ್ವಾರ್ಧದಲ್ಲಿ ಭಾರತಕ್ಕೆ ಕಾಲಿಟ್ಟಿತು. ಆದರೆ ಅದರ ಬೇರುಗಳನ್ನು ಭಾರತದ ಪ್ರಾಚೀನ ಇತಿಹಾಸ, ಸಮಾಜ, ಸಾಹಿತ್ಯ–ಧರ್ಮಗ್ರಂಥಗಳಲ್ಲಿ 'ಸೇವೆ' ಎಂಬ ಪರಿಕಲ್ಪನೆಯಲ್ಲಿ ಕಾಣಬಹುದು. ಈ ಸೇವೆ ಧಾರ್ಮಿಕ ನಂಬಿಕೆ ಮೇಲೆ ಆಧಾರಿತವಾಗಿತ್ತು. ಇದು ಸಮಾಜದಲ್ಲಿರುವ ದೀನದಲಿತರು, ನಿರ್ಗತಿಕರು, ಅಂಗವಿಕಲರು, ವೃದ್ಧರು, ಅನಾಥರು ಮುಂತಾದ ಜನರಿಗೆ ಅವರಿಂದ ಯಾವುದೇ ಪ್ರತಿಫಲಾಪೇಕ್ಷೆಯನ್ನು ಬಯಸದೇ ಮಾನವೀಯತೆ ಆಧಾರದ ಮೇಲೆ ಸಹಾಯಹಸ್ತ ನೀಡುವಂತ ಕಾರ್ಯವಾಗಿತ್ತು. ಈ ಸೇವೆಯನ್ನು ಇಂದಿಗೂ ಮುಂದುವರೆಸಿಕೊಂಡು ಬರಲಾಗಿದೆ. ಕ್ರಮೇಣ ಕಾಲ ಆಧುನಿಕತೆಯತ್ತ ಸಾಗಿದಂತೆ ಈ ಸೇವೆಯಲ್ಲಿ ಸಾಕಷ್ಟು ಬದಲಾವಣೆ, ಬೆಳವಣಿಗೆಗಳು ಕಂಡುಬಂದವು. ಆಧುನಿಕ ವೃತ್ತಿಪರ ಸ್ಪರ್ಶವನ್ನು ಪಡೆದಂತ ಸೇವೆ ಹಂತಹಂತವಾಗಿ ತನ್ನದೇಯಾದ ವಿಧಾನಗಳು, ತಂತ್ರ–ಕೌಶಲ್ಯಗಳನ್ನು ಪಡೆದುಕೊಂಡು ಸಮಾಜಕಾರ್ಯ ವೃತ್ತಿಯಾಗಿ ಹೊರಹೊಮ್ಮಿತು.

ಭಾರತದಲ್ಲಿ ವೃತ್ತಿಪರ ಸಮಾಜಕಾರ್ಯ ಶಿಕ್ಷಣದ ಇತಿಹಾಸವನ್ನು ಬ್ರಿಟಿಷ್ ಆಳ್ವಿಕೆ ಕಾಲದಿಂದಲೂ ಕಾಣಬಹುದಾಗಿದೆ. ಸಮಾಜಕಾರ್ಯದ ಮೊದಲ ಶಾಲೆಯು ಟಾಟಾ ಇನ್ಸ್ಟಿಟ್ಯೂಟ್ ಆಫ್ ಸೋಶಿಯಲ್ ಸೈನ್ಸ್‌ದಲ್ಲಿ (TISS) 1936ರಲ್ಲಿ ಸರ್ ದೊರಾಬ್ಜಿ ಟಾಟಾ ಗ್ರ್ಯಾಜುಯೆಟ್ ಸ್ಕೂಲ್ ಆಫ್ ಸೋಶಿಯಲ್‌ವರ್ಕ್ ಎಂಬ ಹೆಸರಿನಲ್ಲಿ ದೇಶದಲ್ಲಿ ಸ್ಥಾಪನೆಯಾಗಿ ಪದವಿಮಟ್ಟದಲ್ಲಿ ವೃತ್ತಿಪರ ಸಮಾಜಕಾರ್ಯ ಶಿಕ್ಷಣಕ್ಕೆ ನಾಂದಿಹಾಡಿತು. ಇದಕ್ಕೆ ಕಾರಣೀಭೂತರು ಅಮೇರಿಕಾದವರೇ ಆದಂತ ಡಾ. ಕ್ಲಿಫರ್ಡ್ ಮ್ಯಾನಶರ್ಟ್ ಎಂಬುವವರು. ಭಾರತದಲ್ಲಿ ಸಮಾಜಕಾರ್ಯ ಶಿಕ್ಷಣದ ಅವಶ್ಯಕತೆಯನ್ನು

---

[1] *ಸಹಾಯಕ ಪ್ರಾಧ್ಯಾಪಕರು, ಸಮಾಜಕಾರ್ಯ ವಿಭಾಗ, ಶ್ರೀ ಶ್ರೀಪಾದಬೋಧ ಸ್ವಾಮೀಜಿ ಸರಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯ, ಮೂಡಲಗಿ– 591312*

ಮನಗಂಡಂತ ಇವರು ಟಾಟಾ ಫೌಂಡೇಶನ್‌ದೊಂದಿಗೆ ಚರ್ಚಿಸಿ ವೃತ್ತಿಪರ ಸಮಾಜಕಾರ್ಯ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸುವಲ್ಲಿ ಪ್ರಮುಖ ಪಾತ್ರವಹಿಸಿದರು. ಇದರ ನಂತರದ ದಶಕದಲ್ಲಿ ಅಂದರೆ 1936–1946ರ ವರೆಗೆ ಯಾವುದೇ ಸಮಾಜಕಾರ್ಯ ಶಿಕ್ಷಣ ಸಂಸ್ಥೆ ಸ್ಥಾಪನೆಯಾಗದೇ 'ಸುಪ್ತ ಅವಧಿ' ಎಂದು ಕರೆಸಿಕೊಂಡಿತು. 1941ರಲ್ಲಿ ಮಹಾತ್ಮಾ ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮ ಜಾರಿಗೆ ಬಂದಿದ್ದರಿಂದ ಅನೇಕ ಸಮಾಜಕಾರ್ಯಕರ್ತರು ಭಾರತೀಯ ಸಮಾಜದಲ್ಲಿ ಸಮಾಜಕಾರ್ಯ ಶಿಕ್ಷಣವನ್ನು ಅಳವಡಿಸಿಕೊಂಡರು.

1947ರಲ್ಲಿ ಭಾರತದಲ್ಲಿ ಸಮಾಜಕಾರ್ಯಕರ್ತರ ಮೊದಲ ಮತ್ತು ಅತ್ಯಂತ ಪ್ರಮುಖ ರಾಷ್ಟ್ರೀಯ ಸಂಘಟನೆಯಾಗಿದ್ದ ಸಮಾಜಕಾರ್ಯದ ಭಾರತೀಯ ಸಮಾವೇಶ (ICSW) ಹೊರಹೊಮ್ಮಿತು. ICSW ಮತ್ತು ಅದಕ್ಕೆ ಸಂಬಂಧಪಟ್ಟ ಸಂಘಟನೆಗಳ ಮೂಲಕ ರಾಜ್ಯದಿಂದ ಹೆಚ್ಚು ಸಂಘಟಿತವಾದ ಸಾಮಾಜಿಕ ಕಲ್ಯಾಣವು ಮೊದಲ, ನೈಜ ಉಪಕ್ರಮಗಳು ಮತ್ತು ಚಳುವಳಿ ಮೂಲಕ ಚಲಾವಣೆಗೆ ಬಂದವು. ಅದೇ ವರ್ಷ ಅಂದರೆ 1947ರಲ್ಲಿ ಗುಜರಾತ್ ವಿದ್ಯಾಪೀಠ, ಅಹಮದಾಬಾದ್ ಮತ್ತು ಕಾಶಿ ವಿದ್ಯಾಪೀಠ, ವಾರಣಾಸಿಗಳಲ್ಲಿ ಸಮಾಜಕಾರ್ಯ ವಿಭಾಗಗಳು ಗಾಂಧಿವಾದಿಗಳಿಂದ ಸ್ಥಾಪನೆಯಾದವು. 1948ರಲ್ಲಿ ದೆಹಲಿ ಸ್ಕೂಲ್ ಆಫ್ ಸೋಶಿಯಲ್‌ವರ್ಕ್ ವಿಶ್ವವಿದ್ಯಾಲಯದ ಒಂದು ಭಾಗವಾಗಿ ಮೊದಲ ಶಾಲೆಯಾಗಿ ಅಸ್ತಿತ್ವಕ್ಕೆ ಬಂದಿತು. 1949ರಲ್ಲಿ ಬರೋಡಾ ಸ್ಕೂಲ್ ಆಫ್ ಸೋಶಿಯಲ್‌ವರ್ಕ್, ಲಖನೌ ವಿಶ್ವವಿದ್ಯಾಲಯದ ಸಮಾಜಕಾರ್ಯ ವಿಭಾಗ ಆರಂಭಿಸಲಾಯಿತು. ನಂತರ 1955ರಲ್ಲಿ ಆಗ್ರಾದಲ್ಲಿ, 1957 ರಲ್ಲಿ ವಾಲ್ಟೇರ್‌ದಲ್ಲಿ, ನಿರ್ಮಲಾನಿಕೇತನ ಮತ್ತು ಇತರೆ ಸಮಾಜಕಾರ್ಯ ಸಂಸ್ಥೆಗಳು ಬೆಳಕಿಗೆ ಬಂದವು. 1960ರ ಹೊತ್ತಿಗೆ 17 ಸಮಾಜಕಾರ್ಯ ಶಿಕ್ಷಣ ಸಂಸ್ಥೆಗಳಿದ್ದವು. 1975ರಲ್ಲಿ ವಿಶ್ವವಿದ್ಯಾಲಯ ಧನಸಹಾಯ ಆಯೋಗ (UGC) ಪ್ರಾಯೋಜಿತ ಸಮಾಜಕಾರ್ಯ ಶಿಕ್ಷಣದ ಎರಡನೇ ಪುನರಾವಲೋಕನ ಸಮಿತಿಯು ತನ್ನ ಕಾರ್ಯವನ್ನು ಆರಂಭಿಸಿದಾಗ 35 ಸಂಸ್ಥೆಗಳು ಅಸ್ತಿತ್ವದ್ದಲ್ಲಿದ್ದವು. 1990ರ ದಶಕದಲ್ಲಿ ಸಮಾಜಕಾರ್ಯ ಶಿಕ್ಷಣ ಸಂಸ್ಥೆಗಳು ಹೆಚ್ಚಿನ ಸಂಖ್ಯೆಯಲ್ಲಿ ವೃದ್ಧಿಯಾಗಲಾರಂಭಿಸಿದವು. ಇದರಿಂದ 2003ರ ಹೊತ್ತಿಗೆ 260 ಸಮಾಜಕಾರ್ಯ ಶಿಕ್ಷಣ ಸಂಸ್ಥೆಗಳು ಕಂಡುಬಂದವು. ಒಂದು ಅಂದಾಜಿನಂತೆ ಈ ಕಲ್ಯಾಣ ಸಂಸ್ಥೆಗಳ ಮೇಲೆ ನಿಜವಾದ ಲೆಕ್ಕವಿಲ್ಲದಿದ್ದರೂ ದೇಶದಾದ್ಯಂತ ಸಮಾಜಕಾರ್ಯ ಶಿಕ್ಷಣ ಒದಗಿಸುವ 650ಕ್ಕೂ ಹೆಚ್ಚು ಸಂಸ್ಥೆಗಳು ಇವೆ ಎನ್ನಲಾಗಿದೆ. ಅವುಗಳಲ್ಲಿ ಕೆಲವು ಸ್ನಾತಕ ಪದವಿ, ಕೆಲವು ಪ್ರಮಾಣಪತ್ರಗಳ ಕೋರ್ಸ್, ಇನ್ನು ಕೆಲವು ಪಿ.ಜಿ. ಡಿಪ್ಲೊಮಾ ಮತ್ತು ಸಮಾಜಕಾರ್ಯದಲ್ಲಿ ಸ್ನಾತಕೋತ್ತರ (Post Graduation) ಪದವಿಯನ್ನು ಸಹ ನೀಡುತ್ತವೆ. ಇಂದಿರಾ ಗಾಂಧೀ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯ (IGNOU) ಕೂಡ ಸಮಾಜಕಾರ್ಯ ವಿಷಯದಲ್ಲಿ ಪದವಿ, ಸ್ನಾತಕೋತ್ತರ ಪದವಿಗಳನ್ನು ನೀಡುತ್ತಿದೆ.

ಕರ್ನಾಟಕದಲ್ಲಿ ಪ್ರಥಮ ಬಾರಿಗೆ ಸಮಾಜಕಾರ್ಯ ಸ್ನಾತಕೋತ್ತರ ಡಿಪ್ಲೊಮಾ ಕೋರ್ಸ್‌ನ್ನು 1958ರಲ್ಲಿ ಸೆಂಟ್ ಆಗ್ನೆಸ್ ಕಾಲೇಜ್, ಮಂಗಳೂರಿನಲ್ಲಿ ಆರಂಭಿಸಲಾಯಿತು. ಇದಕ್ಕೆ ಕಾರಣೀಕರ್ತರು ಅಲ್ಬೆನಿಯನ್ ಮೂಲದ ಅಮೇರಿಕಾದ ನಾಗರಿಕನಾದಂತ ಫ್ರಾನ್ಸಿಸ್ ಮರಿಯಾ ಯಸಸ್. ನಂತರ 1961–62ರಲ್ಲಿ ನೋಂದಾಯಿತ ಖಾಸಗಿ ಸಂಸ್ಥೆಯೊಂದು ಒಂದು ವರ್ಷದ ಸ್ನಾತಕೋತ್ತರ ಡಿಪ್ಲೊಮಾ

ಕೋರ್ಸ್‌ನ್ನು ಸಮಾಜಕಾರ್ಯ ವಿಷಯದಲ್ಲಿ ಪ್ರಾರಂಭಿಸಿತು. 1962ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಲ್ಲಿ ಸಮಾಜಕಾರ್ಯವು ಮಾನವಶಾಸ್ತ್ರ ವಿಭಾಗದ ಭಾಗವಾಗಿ ಸ್ನಾತಕೋತ್ತರ ಪದವಿಯನ್ನು ಪ್ರಾರಂಭಿಸಿತು. ನಂತರ 1973ರಲ್ಲಿ ಮಾನವಶಾಸ್ತ್ರದಿಂದ ಬೇರ್ಪಟ್ಟು ಪ್ರತ್ಯೇಕವಾದಂತ ಸಮಾಜಕಾರ್ಯ ವಿಭಾಗವಾಯಿತು. 1975ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯ, 1984ರಲ್ಲಿ ಗುಲ್ಬರ್ಗಾ ವಿಶ್ವವಿದ್ಯಾಲಯ, 1990ರಲ್ಲಿ ಮೈಸೂರು ವಿಶ್ವವಿದ್ಯಾಲಯ, 2003–04ರಲ್ಲಿ ಮಂಗಳೂರು ವಿಶ್ವವಿದ್ಯಾಲಯ ಮತ್ತು ಕುವೆಂಪು ವಿಶ್ವವಿದ್ಯಾಲಯ ಶಿವಮೊಗ್ಗ, 2004–05ರಲ್ಲಿ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ ವಿಜಯಪುರ, 2006ರಲ್ಲಿ ದಾವಣಗೆರೆ ವಿಶ್ವವಿದ್ಯಾಲಯ, 2006–07ರಲ್ಲಿ ತುಮಕೂರು ವಿಶ್ವವಿದ್ಯಾಲಯ, 2010–11ರಲ್ಲಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ ಮತ್ತು ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿ, ಹಾಗೆಯೇ ಇತ್ತೀಚೆಗೆ 2012–13ರಲ್ಲಿ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಗುಲ್ಬರ್ಗಾದಲ್ಲಿಯೂ ಸಹಿತ ಸಮಾಜಕಾರ್ಯ ವಿಭಾಗ ಆರಂಭಿಸಲಾಯಿತು. ಪ್ರಸ್ತುತವಾಗಿ ಸುಮಾರು 12 ವಿಶ್ವವಿದ್ಯಾಲಯಗಳಲ್ಲಿ ಸಮಾಜಕಾರ್ಯ ವಿಭಾಗಗಳು ಮತ್ತು ಅವುಗಳ ಅಡಿಯಲ್ಲಿರುವ ಕಾಲೇಜುಗಳಲ್ಲಿ ಸೇರಿ 100 ಕ್ಕಿಂತಲೂ ಹೆಚ್ಚಿನ ಕಾಲೇಜುಗಳಲ್ಲಿ ಸಮಾಜಕಾರ್ಯ ಶಿಕ್ಷಣ ನೀಡಲಾಗುತ್ತಿದೆ. ಕರ್ನಾಟಕವು ದೇಶದಲ್ಲಿ ಅತಿಹೆಚ್ಚು ಸಮಾಜಕಾರ್ಯ ಪ್ರಶಿಕ್ಷಣ ಕೇಂದ್ರಗಳನ್ನು ಹೊಂದಿರುವ 3ನೇ ರಾಜ್ಯವಾಗಿದೆ (1ನೇ ರಾಜ್ಯ ಮಹಾರಾಷ್ಟ್ರ, 2ನೇ ರಾಜ್ಯ ತಮಿಳುನಾಡು). ಉನ್ನತ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಿದಂತ ಕರ್ನಾಟಕ ಸರ್ಕಾರ ಇತ್ತೀಚೆಗೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸುಮಾರು 60ಕ್ಕೂ ಹೆಚ್ಚು ಸಹಾಯಕ ಪ್ರಾಧ್ಯಾಪಕರನ್ನು ಸಮಾಜಕಾರ್ಯ ವಿಷಯದಲ್ಲಿ ನೇಮಕ ಮಾಡಿಕೊಂಡಿದೆ. ಈ ಬೆಳವಣಿಗೆ ಉನ್ನತ ಶಿಕ್ಷಣದಲ್ಲಿ ಸಮಾಜಕಾರ್ಯ ಪ್ರಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲು ಸಹಾಯಕವಾದಂತಾಗಿದೆ.

ಸಮಾಜಕಾರ್ಯ ಶಿಕ್ಷಣ ವೃತ್ತಿಪರ ಕೋರ್ಸ್ ಆಗಿದ್ದರೂ ಸಹಿತ ಇತ್ತೀಚಿನ ಕೆಲವು ವರ್ಷಗಳಿಂದ ವಿದ್ಯಾರ್ಥಿಗಳಲ್ಲಿ ಸಮಾಜಕಾರ್ಯ ವಿಷಯ ಕಲಿಯುವಲ್ಲಿನ ಆಸಕ್ತಿ ಕಡಿಮೆ ಆಗುತ್ತಿದೆ. ಅದಕ್ಕೆ ಕೆಲವೊಂದು ಕಾರಣಗಳಿರುವುದು ಅಷ್ಟೇ ಸತ್ಯ ಸಂಗತಿ. ಸಮಾಜಕಾರ್ಯ ವಿಷಯದಲ್ಲಿ ದೇಶಿಯ ಮತ್ತು ಪ್ರಾದೇಶಿಕ ಭಾಷೆಯಲ್ಲಿ ಸಾಹಿತ್ಯ ಮೂಲಗಳ ಕೊರತೆ. ಪದವಿಪೂರ್ವ ಶಿಕ್ಷಣದ ಪಠ್ಯಕ್ರಮದಲ್ಲಿ ಸಮಾಜಕಾರ್ಯ ವಿಷಯ ಪರಿಚಯಿಸದೇ ಇರುವುದು. ಸರ್ಕಾರಿ ಇಲಾಖೆಗಳಲ್ಲಿ ಉದ್ಯೋಗಾವಕಾಶಗಳ ಕೊರತೆ. ಸ್ಪರ್ದಾತ್ಮಕ ಪರೀಕ್ಷೆಗಳಾದಂತ ಕೇಂದ್ರ ಲೋಕ ಸೇವಾ ಆಯೋಗ (IAS, IPS etc) ಮತ್ತು ರಾಜ್ಯ ಆಡಳಿತ ಸೇವೆಗಳ (KAS) ಮುಖ್ಯ ಪರೀಕ್ಷೆಯಲ್ಲಿ ಸಮಾಜಕಾರ್ಯವನ್ನು ಐಚ್ಛಿಕ ವಿಷಯವಾಗಿ ಅಥವಾ ಸಾಮಾನ್ಯ ಜ್ಞಾನ ಪತ್ರಿಕೆಯಲ್ಲಿ ಪರಿಚಯಿಸದೇ ಇರುವುದು. (ಉತ್ತರಪ್ರದೇಶ ರಾಜ್ಯ ಆಡಳಿತ ಸೇವೆ ಮುಖ್ಯ ಪರೀಕ್ಷೆಯಲ್ಲಿ ಸಮಾಜಕಾರ್ಯ ಐಚ್ಛಿಕ ವಿಷಯವಿದೆ) ಇತ್ಯಾದಿ. ಹೀಗಾಗಿ ಹೆಚ್ಚಿನ ಸಂಖ್ಯೆಯ ಕಾಲೇಜುಗಳಲ್ಲಿ ಸಮಾಜಕಾರ್ಯ ವಿದ್ಯಾರ್ಥಿಗಳ ಸಂಖ್ಯೆ ಬೆರಳೆಣಿಕೆಯಲ್ಲಿ ಮಾತ್ರ ಕಂಡುಬರುತ್ತಿರುವುದು ವಿಷಾದಕರ ಸಂಗತಿ.

ಸಮಾಜಕಾರ್ಯವನ್ನು ಕೇವಲ ಒಂದು ಐಚ್ಛಿಕ ವಿಷಯವಾಗಿ ಪದವಿ ಹಂತದಲ್ಲಿ ಪರಿಚಯಿಸಿಬೇಕು ಎನ್ನುವ ಮಾತು ಕೇಳಿ ಬರುತ್ತಿದ್ದರೂ ಸಹಿತ ವೃತ್ತಿಪರತೆ ಪ್ರಶ್ನೆ ಏಳುವುದು. ಏಕೆಂದರೆ ಸಮಾಜಕಾರ್ಯ ಪ್ರಾಯೋಗಿಕ ಅಧ್ಯಯನದ ಮಹತ್ವದಿಂದಾಗಿ ವೃತ್ತಿಪರ ಕೋರ್ಸ್ ಆಗಿರುವುದು. ಅಷ್ಟೇ

ಅಲ್ಲದೆ ರಾಜ್ಯಾದ್ಯಂತ ಸಮಾಜಕಾರ್ಯದಲ್ಲಿ ಏಕರೂಪದ ಪಠ್ಯಕ್ರಮವನ್ನು ಜಾರಿಗೆ ತರಬೇಕು ಎಂಬ ವಿಚಾರ ಚರ್ಚೆಯಲ್ಲಿದೆ. ಆದರೆ ಇದು ಪ್ರಾದೇಶಿಕತೆಯನ್ನು ವ್ಯಕ್ತಪಡಿಸುವಲ್ಲಿ ಧಕ್ಕೆಯಾಗುವುದು ಎಂಬ ಮಾತು ಇದೆ. ಈ ಕುರಿತು ಇನ್ನಷ್ಟು ಚರ್ಚೆಗಳು ನಡೆಯಬೇಕಾಗಿದ್ದು ಅದರ ಫಲಿತಾಂಶಗಳನ್ನು ಸಕಾರಾತ್ಮಕವಾಗಿ ಅನುಷ್ಠಾನಗೊಳಿಸುವುದು ಇಂದಿನ ಅಗತ್ಯತೆಯಾಗಿದೆ. ಇದರಿಂದ ಸಮಾಜಕಾರ್ಯ ಮೊದಲಿದ್ದಂತ ಒಂದು ಉಚ್ಛ್ರಾಯ ಸ್ಥಿತಿಗೆ ತಲುಪಲು ಸಹಾಯಕವಾಗಬಹುದು. ಪ್ರಾಚೀನ ಕಾಲದಲ್ಲಿರುವ ಸೇವೆಯು ಸಮಾಜದಲ್ಲಿರುವ ನಿರ್ಗತಿಕ ಹಾಗೂ ದುರ್ಬಲ ಜನರಿಗೆ ಅನೇಕ ರೀತಿಯಲ್ಲಿ ಸಹಾಯ ನೀಡುವುದಾಗಿತ್ತು. ಇಂದಿನ ಆಧುನಿಕ ಮಾಹಿತಿ ತಂತ್ರಜ್ಞಾನ ಯುಗದಲ್ಲಿ ಮಾನವ ಜನಾಂಗ ಹಲವಾರು ವಿಭಿನ್ನ ರೀತಿಯ ಮನೋ–ಸಾಮಾಜಿಕ, ಹೊಂದಾಣಿಕೆಯಂತಹ ಸಮಸ್ಯೆಗಳನ್ನು ಎದುರಿಸುತ್ತಿದೆ. ಅಂತಹ ಸಮಸ್ಯೆಗಳಿಗೆ ವೃತ್ತಿಪರ ಸಮಾಜಕಾರ್ಯ ತನ್ನದೆಯಾದ ವಿಶಿಷ್ಟ ವಿಧಾನಗಳು, ತಂತ್ರ–ಕೌಶಲ್ಯಗಳನ್ನು ಬಳಸಿಕೊಂಡು ಪರಿಹಾರ ಸೂಚಿಸಲು ಸಮರ್ಥವಾಗಿದೆ. ಹೀಗಾಗಿ ಮುಂದಿನ ಪೀಳಿಗೆಯ ಜನಾಂಗಕ್ಕೆ ಸದೃಢ ಮತ್ತು ಸುಸ್ಥಿರವಾದ ಸಮಾಜ ನಿರ್ಮಾಣ ಮಾಡಲು ಸಮಾಜಕಾರ್ಯ ಅತ್ಯಂತ ಪ್ರಮುಖ ಪಾತ್ರವಹಿಸುತ್ತದೆ ಎಂದು ಹೇಳಿದರೆ ತಪ್ಪಾಗಲಾರದು.

**ಪರಾಮರ್ಶನ ಗ್ರಂಥಗಳು**


- Deepak Nayak. History, Philosophy and Fields of Social Work (Retrieved from https://www.academia.edu/40090274/NAME_OF_AUTHOR-DEEPAK_NAYAK_History_Philosophy_and_Fields_of_Social_Work_UNIT-I On 30.04.2020).
- Jyothi. H.P. (2014). A Study on Social Work Education in Karnataka unpublished Ph.D. Thesis, University of Mysore. Mysuru.
- Mishra. P.D. (1994). Social Work: Philosophy and Methods. Inter-India Publications, New Delhi.
- Sanjoy Roy. (2012). Field Work in Social Work. Rawat Publications. New Delhi.
- ರಮೇಶ. ಎಮ್. ಸೋನಾಕಾಂಬಳೆ. (2017). ಸಮಾಜಕಾರ್ಯ, ನಿರುತ ಪಬ್ಲಿಕೇಶನ್, ಬೆಂಗಳೂರು.
- ಸುನೀಲಕುಮಾರ್. ಬಿ.ಎನ್. (2016). ಸಮಾಜಕಾರ್ಯ ಮೂಲ ಪರಿಕಲ್ಪನೆಗಳು. ಜನಸ್ಪಂದನ್ ಟ್ರಸ್ಟ್, ಶಿಕಾರಿಪುರ, ಶಿವಮೊಗ್ಗ.
- ಉಮೇಶ ತೇಜಪ್ಪ. (2018). ವೃತ್ತಿಪರ ಸಮಾಜಕಾರ್ಯ ಇತಿಹಾಸ ಮತ್ತು ವಿಚಾರಧಾರೆಗಳು. ಪ್ರಣತಿ ಪ್ರಕಾಶನ, ಬೆಂಗಳೂರು.